7

# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/81/2015-16 ದಿನಾಂಕ:22.09.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಹೆಚ್.ಮಂಜುಳ ತಂದೆ ಹೊಳಲು ಚೆನ್ನಬಸಪ್ಪ<br>ಗ್ರಾಮ:-ಇಟ್ಟಿಗಿ ತಾ:-ಹಡಗಲಿ<br>[ಶ್ರೀ ಎ.ಮಲ್ಲಿಕಾರ್ಜುನ, ವಕೀಲರು, ಹ.ಬೊ.ಹಳ್ಳಿ] | ಹೊಳಲು ಸುರೇಶ ತಂದೆ ಹೊಳಲು ಚನ್ನಬಸಪ್ಪ<br>ಗ್ರಾಮ:-ಇಟ್ಟಿಗಿ ತಾ:-ಹಡಗಲಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಅಲಬೂರು | 89/ಬಿ | 3-78 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಇಟ್ಟಿಗಿ ಗ್ರಾಮದ ನಿವಾಸಿಯಾದ ಹೆಚ್.ಮಂಜುಳ ತಂದೆ ಹೊಳಲು ಚೆನ್ನಬಸಪ್ಪ ಇವರು ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-02775-2015-16 ದಿನಾಂಕ:04.11.2015 ರಂದು ನೋಂದಣಿಯಾಗಿರುತ್ತದೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:05.11.2015 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಯಾವುದೇ ಲಿಖಿತವಾಗಿ ಆಕ್ಷೇಪಣೆ ಬಂದಿರುವುದಿಲ್ಲ. ಆದರೆ ಹೊಳಲು ಸುರೇಶ ತಂದೆ ಹೊಳಲು ಚನ್ನಬಸಪ್ಪ ಇವರು ನಮೂನೆ-21ಕ್ಕೆ ಸಹಿ ಮಾಡಲು ನಿರಾಕರಿಸಿರುತ್ತಾರೆ. ಕಾರಣ, ಎಂ.ಆರ್.ನಂ.53/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:04.03.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:04.03.2016 ರಿಂದ 08.09.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ಅರ್ಜಿದಾರರು ಪರವಕೀಲರು ಹಾಜರಾಗಿ ಹೇಳುವಂತೆ; ಸದರಿ ಜಮೀನು ನೋಂದಾಯಿತ ದಾನ ಪ್ರಕಾರ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆಯನ್ನು ಮಾಡಲು ಮತ್ತು ತಕರಾರುದಾರರಿಗೆ ಈಗಾಗಲೇ ಕನ್ನಿಹಳ್ಳಿ ಗ್ರಾಮದ ಸ.ನಂ.168 ವಿಸ್ತೀರ್ಣ 8-96 ಎಕರೆ ಜಮೀನು ಪಾಲು ಪ್ರಕಾರ 2013-14 ನೇ ಸಾಲಿಗೆ ಅರ್ಜಿದಾರರ ತಾಯಿಯವರು ತಕರಾರುದಾರರಿಗೆ ಪಾಲು ನೀಡಿರುತ್ತಾರೆ. ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-02775-2015-16 ದಿನಾಂಕ:04.11.2015 ರ ಪ್ರಕಾರ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆಯನ್ನು ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪುಟ-2ಕ್ಕೆ..

ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಪ್ರಕರಣದಲ್ಲಿ ನಾನು ಲಿಖಿತವಾಗಿ ಆಗಲೀ ಮತ್ತು ಮೌಖಿಕವಾಗಿ ಆಗಲಿ ನನ್ನ ತಕರಾರು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-02775-2015-16 ದಿನಾಂಕ:04.11.2015 ರಂದು ಪಟ್ಟಾದಾರರಾದ ಹೊಳಲು ಬಸಮ್ಮ ಗಂಡ ಲೇಟ್ ಚನ್ನಬಸಪ್ಪ ಇಟ್ಟಿಗಿ ಇವರು ಹೆಚ್.ಮಂಜುಳ ತಂದೆ ಲೇಟ್ ಚನ್ನಬಸಪ್ಪ ಇವರಿಗೆ ದಾನಕ್ಕೆ ನೋಂದಣಿ ಮಾಡಿಸಿರುತ್ತಾರೆ. ಪ್ರಯುಕ್ತ, ಅರ್ಜಿದಾರರ ಹೆಸರಿಗೆ ನೋಂದಾಯಿತ ದಾನ ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

**-:ಆದೇಶ:-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರನ್ವಯ ಮತ್ತು ಎಂ.ಆರ್.ನಂ.53/2015-16 ರ ಪ್ರಕಾರ, ಅಲಬೂರು ಗ್ರಾಮದ ಸ.ನಂ. 89/ಬಿ ವಿಸ್ತೀರ್ಣ 3-78 ಎಕರೆ ಜಮೀನು ಹೆಚ್.ಮಂಜುಳ ತಂದೆ ಲೇಟ್ ಹೊಳಲು ಚನ್ನಬಸಪ್ಪ ಇವರ ಹೆಸರಿಗೆ ನೋಂದಾಯಿತ ದಾನ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:22.09.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

22/9/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.